ಕಾನೂನಿನ ನಡಿಗೆ ಮಹಿಳೆಯರ ಕಡೆಗೆ
DEEDS
Since 1982

# DEEDS ಸಂವಾದ

ಸಮತೆಯ ಸಮಾಜದೆಡೆಗೆ

ಸಂವಾದ 4

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು

ಡೀಡ್ಸ್ ಸಂಸ್ಥೆಯ 2020–23ನೇ ಸಾಲಿನ ನಾಲ್ಕನೆಯ ಸಂವಾದ ಈಗ ನಿಮ್ಮ ಕೈ ಸೇರುತ್ತಿದೆ. ಕೊರೊನಾ ಕಾಲಘಟ್ಟವು ಕಳೆದ ಒಂದು ವರುಷ ನಮ್ಮೆಲ್ಲರ ಜೀವನವನ್ನು ಅಸ್ಥವ್ಯಸ್ಥಗೊಳಿಸಿದೆ. ಪ್ರಸ್ತುತ ಕಾಲವನ್ನು ನಾವು ಕೊರೊನಾ ಪೂರ್ವ ಮತ್ತು ಕೊರೊನಾ ನಂತರದ ಕಾಲವಾಗಿ ವಿಂಗಡಿಸುವಂತಹ ಸ್ಥಿತಿಯನ್ನು ತಲುಪಿದ್ದೇವೆ. ನಮ್ಮ ನಡುವಿನ ಅನೇಕರು ಕೊರೊನಾಕ್ಕೆ ಬಲಿಯಾಗಿದ್ದಾರೆ. ಇನ್ನೂ ಕೆಲವರು ತಮ್ಮ ಬದುಕನ್ನು ಕಟ್ಟಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ತಳಮಟ್ಟದ ಸಮುದಾಯ ಅದರಲ್ಲೂ ಮಹಿಳೆಯರು ತೀವ್ರ ನೋವು ಮತ್ತು ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಈ ವರ್ಷ ವಿಶ್ವ ಸಂಸ್ಥೆಯ ಪ್ರಕಾರ 243 ಮಿಲಿಯ 15–49 ವರ್ಷದೊಳಗಿನ ಮಹಿಳೆ ಮತ್ತು ಮಕ್ಕಳು ತಮ್ಮ ಮನೆಯವರಿಂದಲೇ ದೈಹಿಕ ಹಾಗೂ ಲೈಂಗಿಕ ಹಿಂಸೆಯನ್ನು ಅನುಭವಿಸಿದ್ದಾರೆ. ಇದು ಕಳೆದ ವರ್ಷಕ್ಕಿಂತ ಸಾಧಾರಣ 46% ರಷ್ಟು ಹೆಚ್ಚಾಗಿದೆ. ಇಂತಹ ಪರಿಸ್ಥಿತಿಗೆ ಪ್ರಮುಖ ಕಾರಣ ಮಿತಿ ಮೀರಿದ ಬಡತನ, ಇಕ್ಕಟ್ಟಾದ ಜೀವನ ಪರಿಸ್ಥಿತಿ, ಚಲನ ವಲನಕ್ಕೆ ತಡೆ ಮತ್ತು ಮಹಿಳೆಯರು ವಿಧಿಯಿಲ್ಲದೆ ಹಿಂಸೆ ಮಾಡುವವರೊಂದಿಗೆ ಜೀವಿಸುತ್ತಿರುವುದು. ಲಾಕ್‌ಡೌನ್ ಸಮಯದಲ್ಲಿ ಹಿಂಸೆಯನ್ನು ಅನುಭವಿಸಿದ ಮಹಿಳೆಯರಲ್ಲಿ 40 ಶೇಕಡಾ ಮಹಿಳೆಯರು ಕ್ವಾರಂಟೈನ್‌ನಿಂದ ಯಾವುದೇ ರೀತಿಯ ಸಹಾಯ ಪಡೆಯಲು ವಿಫಲರಾಗಿದ್ದಾರೆ.

ಕರ್ನಾಟಕದಲ್ಲೂ ಮಹಿಳಾ ದೌರ್ಜನ್ಯ ಮತ್ತು ಬಾಲ್ಯ ವಿವಾಹಗಳು ಹೆಚ್ಚುತ್ತಿರುವ ಬಗ್ಗೆ ವರದಿಗಳು ಬಂದಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಈ ವರ್ಷ ರಾಜ್ಯದಲ್ಲಿ 2711 ಬಾಲ್ಯ ವಿವಾಹಗಳನ್ನು ತಡೆದಿದ್ದಾರೆ. ಮುಚ್ಚಿರುವ ಶಾಲೆಗಳು ಹಾಗೂ ಕೈಗೆಟಕದ ಆನ್‌ಲೈನ್ ಶಿಕ್ಷಣ ಅನೇಕ ಮಕ್ಕಳನ್ನು ಅನಕ್ಷರತೆ ಮತ್ತು ಬಾಲ್ಯವಿವಾಹಕ್ಕೆ ತಳ್ಳಿದೆ. ಈ ಮೂಲಕ ಅವರನ್ನು ಶಿಕ್ಷಣ ಮತ್ತು ಉನ್ನತ ಭವಿಷ್ಯದಿಂದ ವಂಚಿಸಿದೆ. ಲಿಂಗ ಅಸಮಾನತೆ, ಅನಕ್ಷರತೆ, ಮಹಿಳೆಯರ ಮೇಲಿನ ಹಿಂಸೆಗಳು, ಬಾಲ್ಯವಿವಾಹಗಳು ಹೆಣ್ಮಕ್ಕಳು ಮತ್ತು ಮಹಿಳೆಯರ ಹಕ್ಕುಗಳ ಉಲ್ಲಂಘನೆಯಾಗಿವೆ. ಈ ಉಲ್ಲಂಘನೆಗಳಿಗೆ ಮಹಿಳೆಯರ ಹಕ್ಕು – ಕಾನೂನುಗಳ ಅರಿವಿನ ಬಹುವಾದ ಕೊರತೆಯು ಕಾರಣವಾಗಿದೆ. ಹಾಗಾಗಿ ಹೆಚ್ಚು ಹೆಚ್ಚು ಕಾನೂನು ಅರಿವಿನ ಕಾರ್ಯಕ್ರಮಗಳು ನಡೆಯಬೇಕಾಗಿದೆ. ಜತೆಗೆ ನ್ಯಾಯ ಒದಗಿಸುವ ವ್ಯವಸ್ಥೆಯನ್ನು ಸದೃಢಗೊಳಿಸುವ ಅವಶ್ಯಕತೆಯಿದೆ. ಹಕ್ಕುಗಳಿಂದ ವಂಚಿತರಾಗುವ ಮಹಿಳೆಯರು ಹಾಗೂ ಕೈಗೆಟಕದ ನ್ಯಾಯ ವ್ಯವಸ್ಥೆಗೆ ಕೊಂಡಿಯಂತಿರುವ ಮಹಿಳಾಪರ ಚಿಂತನೆಯುಳ್ಳ, ಜಾಗೃತ ಪೂರಕ ಕಾನೂನು ತರಬೇತುದಾರರ ಅವಶ್ಯಕತೆ ಸದ್ಯದ ತುರ್ತು ಆಗಿದೆ.

ಈ ಹಿನ್ನಲೆಯಲ್ಲಿ ತಳಹಂತದ ಮಹಿಳೆಯರು ಮತ್ತು ಕಾರ್ಯಕರ್ತರಲ್ಲಿ ಮಾಹಿತಿ ಪಸರಿಸುವ ಕೆಲಸವನ್ನು ಸುಮಾರು 39 ವರ್ಷಗಳಿಂದ ಕಾರ್ಯಾಚರಿಸುತ್ತಿರುವ ಡೀಡ್ಸ್ ಸಂಸ್ಥೆ ತನ್ನ ತರಬೇತಿಗಳ ಮೂಲಕ ಮಾಡುತ್ತಿದೆ. ಕಳೆದ ಒಂದು ವರ್ಷದಿಂದ ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಲಿಂಗತ್ವ, ಮಹಿಳಾ ಕಾನೂನು ಮತ್ತು ಮಹಿಳಾ ಪ್ರಕರಣ ನಿರ್ವಹಣೆಯಂತಹ ಮೂರು ಹಂತದ ತರಬೇತಿಗಳನ್ನು ಪೂರೈಸಿ 60 ಮಂದಿ ಪೂರಕ ಕಾನೂನು ತರಬೇತಿದಾರನ್ನು ರೂಪಿಸಿ ಸುಮಾರು 4000 ತಳಮಟ್ಟದ ಮಹಿಳೆಯರಿಗೆ ಮಾಹಿತಿಯನ್ನು ನೀಡಿದೆ. ಈಗಾಗಲೇ ದಕ್ಷಿಣ ಕನ್ನಡ, ಕೊಪ್ಪಳ, ಗದಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಪೂರಕ ಕಾನೂನು ತರಬೇತಿದಾರರನ್ನು ರೂಪಿಸಿದ್ದು, ಇವರು ಆಯಾಯ ಜಿಲ್ಲೆಗಳಲ್ಲಿ ಮಹಿಳಾ ಪ್ರಕರಣಗಳನ್ನು ಕೈಗೆತ್ತಿಕೊಂಡು ಮಹಿಳಾ ಹಕ್ಕುಗಳನ್ನು ಸಂರಕ್ಷಿಸುವ ಧ್ಯೇಯೋದ್ದೇಶದಿಂದ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ವರ್ಷದಲ್ಲಿ ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಪೂರಕ ಕಾನೂನು ಯೋಜನೆಯನ್ನು ಆರಂಭಿಸಲು ಕಾರ್ಯ ನಿರ್ವಹಿಸುತ್ತಿದ್ದೇವೆ. ನಮ್ಮ ಈ ಪ್ರಯತ್ನಕ್ಕೆ ಕೈ ಜೋಡಿಸಲು ನಿಮ್ಮನ್ನು ಕೋರುತ್ತೇವೆ.

**ಮರ್ಲಿನ್ ಮಾರ್ಟಿಸ್**

## ಕಾನೂನಿನ ನಡಿಗೆ ಮಹಿಳೆಯರ ಕಡೆಗೆ : ಸ್ಥೂಲ ಪರಿಚಯ

ಪ್ರತೀ ಮಹಿಳೆಯೂ ನಮ್ಮ ಸಂವಿಧಾನ ಒದಗಿಸಿಕೊಟ್ಟ ಹಕ್ಕು ಮತ್ತು ಕಾನೂನುಗಳನ್ನು ತಿಳಿದುಕೊಂಡು, ತನ್ನ ಮೇಲಾಗುವ ಹಕ್ಕುಗಳ ವಂಚನೆ ಮತ್ತು ಹಿಂಸೆಯನ್ನು ಹೋಗಲಾಡಿಸಲು ಲಭ್ಯ ಕಾನೂನುಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾಗಿದೆ. ಅಲ್ಲದೆ ಸ್ಥಳೀಯವಾಗಿ ಮಹಿಳೆಯರ ಸಮಸ್ಯೆಗಳಿಗೆ ಈ ಮೂಲಕ ಸ್ಪಂದಿಸುವುದೂ ಅಗತ್ಯವಾಗಿದೆ. ಮಹಿಳೆಯರಿಗೆ ಲಭ್ಯವಿರುವ ಕಾನೂನುಗಳು ಮತ್ತು ಸೌಲಭ್ಯಗಳ ಮಾಹಿತಿಯನ್ನು ತಳಮಟ್ಟದಲ್ಲಿ ವ್ಯಾಪಕವಾಗಿ ನೀಡುತ್ತಾ ತಾರತಮ್ಯ ಮತ್ತು ಹಿಂಸೆಯನ್ನು ಕೊನೆಗೊಳಿಸುವ ಉದ್ದೇಶದೊಂದಿಗೆ ಡೀಡ್ಸ್ ಪೂರಕ ಕಾನೂನು ಕಾರ್ಯಕ್ರಮವನ್ನು ಯೋಜಿಸಿ ಕಾರ್ಯಗತಗೊಳಿಸುತ್ತಿದೆ. 2020–2021ರ ಸಾಲಿನಲ್ಲಿ ಉತ್ತರಕನ್ನಡ, ಧಾರವಾಡ ಜಿಲ್ಲೆಗಳಲ್ಲಿ ತರಬೇತಿಯು ನಡೆದಿರುತ್ತದೆ. 2021–2022ರ ಸಾಲಿನಲ್ಲಿ ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳಲ್ಲಿ ಕಾರ್ಯಕ್ರಮ ಕಾರ್ಯಗತಗೊಳ್ಳುತ್ತಿದೆ.

**ಪೂರಕ ಕಾನೂನು ಕಾರ್ಯಕ್ರಮದ ಕಾರ್ಯತಂತ್ರಗಳು/ಚಟುವಟಿಕೆಗಳು**

**1. ಪೂರಕ ಕಾನೂನು ಬಗ್ಗೆ ಮಾಹಿತಿ–ಮಾರ್ಗದರ್ಶನ ಸಭೆಗಳು**

ಪೂರಕ ಕಾನೂನು ಕಾರ್ಯಕ್ರಮಗಳು ನಿರಂತರವಾಗಿ ಮುಂದಿನ ದಿನಗಳಲ್ಲಿ ನಡೆಯಬೇಕು, ಸ್ಥಳೀಯ ಸ್ವಯಂ ಸೇವಾಸಂಸ್ಥೆಗಳು, ಸಮುದಾಯ ಅಭಿವೃದ್ಧಿ ಸಂಸ್ಥೆಗಳು ಇವನ್ನು ಮುಂದುವರಿಸಿಕೊಂಡು ಹೋಗಬೇಕು, ಈ ಸಂಸ್ಥೆಗಳ ಫಲಾನುಭವಿ ಸಮುದಾಯಕ್ಕೆ ಪೂರಕ ಕಾನೂನು ಸೌಲಭ್ಯಗಳು ಲಭ್ಯವಾಗಬೇಕು ಎನ್ನುವ ಹಿನ್ನೆಲೆಯಲ್ಲಿ ಈ ಸಂಸ್ಥೆಗಳ ಕಾರ್ಯಕರ್ತರನ್ನು ಗುರುತಿಸಲಾಗುತ್ತದೆ. ಗುರುತಿಸಿದ ನಂತರ ಕಾರ್ಯಕರ್ತರಿಗೆ ಮತ್ತು ಸಂಸ್ಥೆಗಳ ಮುಖ್ಯಸ್ಥರಿಗೆ ಪೂರಕ ಕಾನೂನು ಬಗ್ಗೆ ಮಾಹಿತಿ ನೀಡಲಾಗುತ್ತದೆ. ಇದೇ ಸಂದರ್ಭದಲ್ಲಿ ತರಬೇತಿಯಲ್ಲಿ ಪಾಲ್ಗೊಳ್ಳಲು ಸಿದ್ಧವಿರುವ ಅಭ್ಯರ್ಥಿಗಳಿಗೆ ಆಯ್ದ ತಳಮಟ್ಟದ ಜನರ ಸ್ಥಿತಿಗತಿ ಮತ್ತು ಕಾನೂನಿನ ತಿಳಿವಳಿಕೆಯ

ಮಾಹಿತಿ ಸಂಗ್ರಹ ಮಾಡಲು ತಿಳಿಸಲಾಗುತ್ತದೆ. ಈ ಮಾಹಿತಿ ಸಂಗ್ರಹ ಮಾಡಿದ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುತ್ತದೆ.

**2. ಪೂರಕ ಕಾನೂನು ಸುಗಮಕಾರರ ತರಬೇತಿ**

ಪೂರಕ ಕಾನೂನು ಸುಗಮಕಾರರನ್ನು ತರಬೇತಿಗೆ ಕಳುಹಿಸಿಕೊಡುವ ಸಂಸ್ಥೆಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಭಾಗಿತ್ವದಲ್ಲಿ ಪೂರಕ ಕಾನೂನು ಕಾರ್ಯಕ್ರಮವು ನಡೆಯುತ್ತದೆ. ಮಹಿಳಾಪರ ಚಿಂತನೆಯುಳ್ಳ, ಜಾಗೃತ ಪೂರಕ ಕಾನೂನು ಸುಗಮಕಾರರ ತಂಡವನ್ನು ನಿಗದಿತ ಜಿಲ್ಲೆಗಳಲ್ಲಿ ಕಟ್ಟುವ ಉದ್ದೇಶದೊಂದಿಗೆ ಈ ತರಬೇತಿಯನ್ನು ನಡೆಸಲಾಗುತ್ತದೆ.



ಮೊದಲ ಹಂತದಲ್ಲಿ ಮಹಿಳಾಸ್ಥಿತಿಗತಿ, ಲಿಂಗತ್ವ, ಸುಗಮಗಾರಿಕೆ ಕೌಶಲ್ಯ, ಲಿಂಗಸೂಕ್ಷ್ಮತೆಯಲ್ಲಿ ಸಿದ್ಧತೆ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಪ್ರಾತ್ಯಕ್ಷಿಕೆ ಈ ಮೊದಲಾದ ಮಾಹಿತಿಗಳನ್ನು ನೀಡಲಾಗುತ್ತದೆ.

ಎರಡನೇ ಹಂತದಲ್ಲಿ ಮಹಿಳಾ ಹಕ್ಕು / ಕಾನೂನುಗಳ ಮಾಹಿತಿ (ಮುಖ್ಯವಾಗಿ ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಆಸ್ತಿಹಕ್ಕು), ನ್ಯಾಯಾಲಯ ವೀಕ್ಷಣೆ, ಪೊಲೀಸ್ ಠಾಣೆ ವೀಕ್ಷಣೆ ಮೊದಲಾದ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಮೂರನೇ ಹಂತದಲ್ಲಿ ಮಹಿಳಾ ಪ್ರಕರಣಗಳ ನಿರ್ವಹಣೆ, ಆಪ್ತಸಮಾಲೋಚನೆ, ದೂರು ಅರ್ಜಿ ಬರವಣಿಗೆ, ಎಫ್ಐಆರ್, ಡಿಐಆರ್ ಮಾಹಿತಿ, ಸಾಂತ್ವನ ಕೇಂದ್ರ-ಸಖಿ ಕೇಂದ್ರ ವೀಕ್ಷಣೆ ಮೊದಲಾದ ಚಟುವಟಿಕೆಗಳು ಇರುತ್ತವೆ.

ತರಬೇತಿಯ ಸಂದರ್ಭದಲ್ಲಿ ಸುಗಮಕಾರರ ಪಟ್ಟಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನೀಡಿ, ಈ ಸುಗಮಕಾರರನ್ನು ಪ್ಯಾರಾಲೀಗಲ್ ವಾಲ್ಯುಂಟಿಯರ್ ಆಗಿ ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಪ್ರಾಧಿಕಾರ ಮೂಲಕ ಸುಗಮಕಾರರು ಹೆಚ್ಚಿನ ಕಾನೂನು ಅರಿವು ಮತ್ತು ಸಮಸ್ಯೆಯಲ್ಲಿರುವ ಮಹಿಳೆಯರಿಗೆ, ಜನರಿಗೆ ಸೇವೆಯನ್ನು ನೀಡಲು ಮತ್ತು ಅದನ್ನು ಮುಂದುವರಿಸಲು ಇದರಿಂದ ಸಾಧ್ಯವಾಗಲಿದೆ.

**3. ತಳಮಟ್ಟದ ಮಾಹಿತಿ ಕಾರ್ಯಕ್ರಮ**

ತರಬೇತಿ ಪಡೆದ ಪೂರಕ ಕಾನೂನು ಸುಗಮಕಾರರು ತಮ್ಮ ತರಬೇತಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಅವರ ಪ್ರದೇಶದ ಜನರು ತಿಳಿವಳಿಕೆಯನ್ನು ಹೊಂದಿ, ಅವರು ತಮ್ಮ ಸುತ್ತಮುತ್ತಲಿನ ಸಮಸ್ಯೆಗಳಿಗೆ ಸ್ಪಂದಿಸುವಂತೆ ಅವರನ್ನು ತಯಾರುಗೊಳಿಸಲು ತಳಮಟ್ಟದ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕನಿಷ್ಠ 25 ಮಂದಿಗೊಂದರಂತೆ ಒಟ್ಟು 50 ಮಂದಿಗೆ ಎರಡು ಮಾಹಿತಿ ಕಾರ್ಯಕ್ರಮಗಳನ್ನು ಪ್ರತೀ ಹಂತದಲ್ಲಿ



ಹಮ್ಮಿಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಒಂದು ಜಿಲ್ಲೆಯಲ್ಲಿ 80 ಕಾರ್ಯಕ್ರಮಗಳಂತೆ 2000 ಜನರು ನೇರವಾಗಿ ಮಾಹಿತಿ ಪಡೆಯಲಿದ್ದಾರೆ.

**4. ಮನೆ ಮನೆ ಮಾಹಿತಿ ಕಾರ್ಯಕ್ರಮ**

ತಳಮಟ್ಟದ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಶಿಬಿರಾರ್ಥಿಯೂ ತಾನು ಕಲಿತ ಮಾಹಿತಿಯನ್ನು, ಪಡೆದ ಮಾಹಿತಿ ಸಾಮಗ್ರಿಗಳನ್ನು ತನ್ನ ಪ್ರದೇಶದ ಕನಿಷ್ಠ 10 ಮನೆಗಳಿಗೆ ಹಂಚಬೇಕು. ಅದರಂತೆ ಒಂದು ಜಿಲ್ಲೆಯಲ್ಲಿ 20,000 ಮನೆಗಳನ್ನು ಮಾಹಿತಿ-ಮಾಹಿತಿ ಸಾಮಗ್ರಿಗಳೊಂದಿಗೆ ತಲುಪಲು ಸಾಧ್ಯವಾಗುತ್ತದೆ.

**5. ಪೂರಕ ಕಾನೂನು ಸುಗಮಕಾರಾರ / ತಳಮಟ್ಟದ ಭಾಗಾರ್ಥಿಗಳ ಸಮಾವೇಶ**

ಮೂರು ಹಂತದ ಸುಗಮಕಾರರ ತರಬೇತಿ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮ ಮುಗಿದ ನಂತರ ಪ್ರತೀ ಜಿಲ್ಲೆಯಲ್ಲಿ ಎಲ್ಲಾ ಸುಗಮಕಾರರು ಮತ್ತು ಪ್ರತೀ ತಳಮಟ್ಟದ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಂದ ಆಯ್ದ 4-5 ಮಂದಿಯನ್ನು ಜಿಲ್ಲಾ ಮಟ್ಟದಲ್ಲಿ ಸೇರಿಸಿ ಸಮಾವೇಶ ನಡೆಯಲಿದೆ.

**6. ಜಿಲ್ಲಾ ಮತ್ತು ರಾಜ್ಯಮಟ್ಟದ ಪೂರಕ ಕಾನೂನು ಸುಗಮಕಾರರ ವೇದಿಕೆ**

ಪೂರಕ ಕಾನೂನು ತರಬೇತಿ ಪಡೆದ ಸುಗಮಕಾರರು ಅವರದೇ ಆದ ವೇದಿಕೆಯನ್ನು ರಚಿಸಲು ಪ್ರೋತ್ಸಾಹಿಸಲಾಗುತ್ತದೆ. ಕೊಪ್ಪಳ, ಚಿತ್ರದುರ್ಗ, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಈಗಾಗಲೇ ವೇದಿಕೆ ರಚನೆಯಾಗಿರುತ್ತದೆ. ಉತ್ತರಕನ್ನಡ, ಧಾರವಾಡ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳಲ್ಲೂ ಸುಗಮಕಾರರ ವೇದಿಕೆ ರಚನೆಯಾಗಲಿದೆ. ಪ್ರತಿನಿಧಿಗಳು ರಾಜ್ಯಮಟ್ಟದ ಸುಗಮಕಾರರ ವೇದಿಕೆಯನ್ನು ಪ್ರತಿನಿಧಿಸಲಿದ್ದಾರೆ. ರಾಜ್ಯ ವೇದಿಕೆ ಜಿಲ್ಲಾಮಟ್ಟದ ವೇದಿಕೆಗಳ ಉಸ್ತುವಾರಿ ವಹಿಸುವುದು ಅಲ್ಲದೆ ಮಹಿಳೆಯರ ಪ್ರಕರಣಗಳಿಗೆ ಸಂಬಂಧಿಸಿ ಬೆಂಬಲ ಮತ್ತು ಕಾನೂನು-ನ್ಯಾಯ ವ್ಯವಸ್ಥೆಯನ್ನು ಬಲಪಡಿಸಲು ಪೂರಕ ಜಿಲ್ಲಾ ಮತ್ತು ರಾಜ್ಯ ಇಲಾಖೆಗಳೊಂದಿಗೆ ವ್ಯವಹರಿಸುತ್ತದೆ.

ಪೂರಕ ಕಾನೂನು ಯೋಜನೆಯಲ್ಲಿ ಒಳಗೊಳ್ಳುವ ಸ್ವಯಂಸೇವಾ ಸಂಸ್ಥೆಗಳು, ಪೂರಕ ಕಾನೂನು ಸುಗಮಕಾರರು, ತಳಮಟ್ಟದ ಮಹಿಳೆಯರು, ಇಲಾಖೆಗಳು, ಎಲ್ಲಾ ಪ್ರಯೋಜನಾರ್ಥಿಗಳು-ಹೀಗೆ ಎಲ್ಲರ ಪ್ರೋತ್ಸಾಹ



ನಡೆಯುತ್ತಿರುವ ಪೂರಕ ಕಾನೂನು ಯೋಜನೆಗೆ ಇರಲಿ ಎಂಬುವುದೇ ನಮ್ಮ ಆಶಯ.

**ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ರಚನೆ**

ಪೂರಕ ಕಾನೂನು ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಲು, ನೊಂದ ಮಹಿಳೆಯರಿಗೆ ನ್ಯಾಯಿಕ ಮಾರ್ಗದರ್ಶನ ಮಾಡುವ ಉದ್ದೇಶದೊಂದಿಗೆ ತರಬೇತಿ ಪಡೆದ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು.

ಧಾರವಾಡ ಜಿಲ್ಲೆಯಲ್ಲಿ ಪದ್ಮಪ್ರಿಯಾ ಮುಖ್ಯ ಸಂಚಾಲಕರಾಗಿ, ನಸ್ರೀನ್ ಉಪಮುಖ್ಯ ಸಂಚಾಲಕರಾಗಿ, ಜಯಲಕ್ಷ್ಮಿ ಗದಗಿನ ಕಾರ್ಯಕಾರಿ ಸಂಚಾಲಕರಾಗಿ, ವಿಜಯಾ ಬಿ ವಿತ್ತ ನಿರ್ವಹಣಾ ಸಂಚಾಲಕರಾಗಿ, ಕುಸುಮಾ, ಬಾಳಾಕ್ಷಿ, ಉಮಾಮಹೇಶ್ವರಿ ಸಂತಾನಿ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ಲಾರಾ ಫೆರ್ನಾಂಡಿಸ್ ಮುಖ್ಯ ಸಂಚಾಲಕರಾಗಿ, ಸಂಗೀತಾ ಉಪಮುಖ್ಯ ಸಂಚಾಲಕರಾಗಿ, ಇಸಬೆಲ್ಲಾ ಕಾರ್ಯಕಾರಿ ಸಂಚಾಲಕರಾಗಿ, ಆಶಾ ಉಪಕಾರ್ಯಕಾರಿ ಸಂಚಾಲಕರಾಗಿ, ಎರ್ಮಿಲಿನ್ ವಿತ್ತ ನಿರ್ವಹಣಾ ಸಂಚಾಲಕರಾಗಿ, ಮಂಜುನಾಥ ಗೌಡ, ವೇದಾವತಿ, ನಾಗರತ್ನ, ಅಖಿಲಾ, ರೇಣುಕಾ, ಮೇರಿವೈಲೆಟ್, ಮೇರಿ ಮೆಂಡೋನ್ಸ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

# ಪೂರಕ ಕಾನೂನು ತರಬೇತಿ ಕಾರ್ಯಕ್ರಮ

### ಉತ್ತರ ಕನ್ನಡ ಜಿಲ್ಲೆ

ಪೂರಕ ಕಾನೂನು ಸುಗಮಕಾರರಿಗೆ ಮಹಿಳಾ ಪ್ರಕರಣಗಳ ನಿರ್ವಹಣೆ ಬಗೆಗಿನ ಕೊನೆಯ ಹಂತದ 3 ದಿನಗಳ ತರಬೇತಿಯು 2021 ಸೆಪ್ಟೆಂಬರ್ ತಿಂಗಳ 23, 24, 25ರಂದು ಹೊನ್ನಾವರದ ದಿ ಸೋಶಿಯಲ್ ಕ್ಲಬ್‌ನಲ್ಲಿ ನಡೆಯಿತು. 12 ಸುಗಮಕಾರರು ಭಾಗವಹಿಸಿದ್ದರು. ಪ್ರಕರಣ ನಿರ್ವಹಣೆ, ಆಪ್ತಸಮಾಲೋಚನೆ, ದೂರು ಅರ್ಜಿ ಬರವಣಿಗೆ, ಕೌಟುಂಬಿಕ ಘಟನಾ ವರದಿ, ಎಫ್ ಐಆರ್, ದಾಖಲೆಗಳ ಮಹತ್ವ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಯೋಜನೆ, ಗೂಗಲ್ ಮೀಟ್ ಪ್ರಾತ್ಯಕ್ಷಿಕೆ, ಮೌಲ್ಯಮಾಪನ ವಿಷಯಗಳ ಮಾಹಿತಿ ನೀಡಲಾಯಿತು. ತುಕಾರಾಮ ಎಕ್ಕಾರು, ಜೆಸಿಂತಾ, ದೀಪಾ, ಖುಶಿ, ಎರ್ಮಿಲಿನ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.



3ನೇ ಹಂತದ ತರಬೇತಿ ಕಾರ್ಯಕ್ರಮ, ಹೊನ್ನಾವರ

### ಧಾರವಾಡ ಜಿಲ್ಲೆ

ಪೂರಕ ಕಾನೂನು ಸುಗಮಕಾರರಿಗೆ ಮಹಿಳಾ ಪ್ರಕರಣಗಳ ನಿರ್ವಹಣೆ ಬಗೆಗಿನ ಕೊನೆಯ ಹಂತದ ತರಬೇತಿಯು ಸೆಪ್ಟೆಂಬರ್ ತಿಂಗಳ 17, 18, 19, 2021ರಂದು ಹುಬ್ಬಳ್ಳಿಯ ಡಾನ್‌ಬಾಸ್ಕೋ ಸಭಾಂಗಣದಲ್ಲಿ ನಡೆಯಿತು. 26 ಸುಗಮಕಾರರು ಭಾಗವಹಿಸಿದ್ದರು. ಪ್ರಕರಣ ನಿರ್ವಹಣೆ, ಆಪ್ತಸಮಾಲೋಚನೆ, ದೂರು ಅರ್ಜಿ ಬರವಣಿಗೆ, ಕೌಟುಂಬಿಕ ಘಟನಾ ವರದಿ, ಎಫ್ ಐಆರ್, ದಾಖಲೆಗಳ ಮಹತ್ವ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಯೋಜನೆ, ಗೂಗಲ್ ಮೀಟ್ ಪ್ರಾತ್ಯಕ್ಷಿಕೆ, ಮೌಲ್ಯಮಾಪನ ವಿಷಯಗಳ ಮಾಹಿತಿ ನೀಡಲಾಯಿತು. ತುಕಾರಾಮ ಎಕ್ಕಾರು, ದೀಪಾ ನಸ್ರೀನ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ನ್ಯಾಯಾಧೀಶರಾದ ಹುಬ್ಬಳ್ಳಿಯ 4ನೇ ಜೆ.ಎಂ.ಎಫ್.ಸಿ. ಕೋರ್ಟ್‌ನ ಶ್ರೀಮತಿ ಮಂಜುಳಾರವರು ಭಾಗವಹಿಸಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸೌಲಭ್ಯಗಳ ಮಾಹಿತಿ ನೀಡಿದರು.



3ನೇ ಹಂತದ ತರಬೇತಿ ಕಾರ್ಯಕ್ರಮ, ಹುಬ್ಬಳ್ಳಿ

# ತಳಮಟ್ಟದ ಮಾಹಿತಿ ಕಾರ್ಯಕ್ರಮ

### ಉತ್ತರ ಕನ್ನಡ ಜಿಲ್ಲೆ

2ನೇ ಹಂತದ ಕಾನೂನು ತರಬೇತಿ ಪಡೆದ 12 ಪೂರಕ ಕಾನೂನು ಸುಗಮಕಾರರು 24 ಕಾನೂನು ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿದ್ದು 350 ಮಂದಿ ಭಾಗವಹಿಸಿರುತ್ತಾರೆ.



ದಿನಾಂಕ 09-04-2021ರಂದು ನಡೆದ ತಳಮಟ್ಟದ ಮಾಹಿತಿ ಕಾರ್ಯಕ್ರಮ, ಒಂದೂರು

### ಧಾರವಾಡ ಜಿಲ್ಲೆ

2ನೇ ಹಂತದ ಕಾನೂನು ತರಬೇತಿ ಪಡೆದ 23 ಪೂರಕ ಕಾನೂನು ಸುಗಮಕಾರರು 46 ಕಾನೂನು ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿದ್ದು 1100 ಮಂದಿ ಭಾಗವಹಿಸಿರುತ್ತಾರೆ.



ದಿನಾಂಕ 18-08-2021ರಂದು ನಡೆದ ತಳಮಟ್ಟದ ಮಾಹಿತಿ ಕಾರ್ಯಕ್ರಮ, ಗುಡಿಸಾಗರ

# ರಾಜ್ಯ ಮಟ್ಟದ ಸುಗಮಕಾರರ ಸಮುಚ್ಚಯದ ಚಟುವಟಿಕೆ

ದಿನಾಂಕ ಜುಲೈ 30, 2021 ಮತ್ತು ಸೆಪ್ಟೆಂಬರ್ 24, 2021ರಂದು ರಾಜ್ಯ ಮಟ್ಟದ ಪೂರಕ ಕಾನೂನು ಸುಗಮಕಾರರ ಗೂಗಲ್ ಸಭೆಯು ನಡೆಯಿತು. ಈ ಸಭೆಯಲ್ಲಿ 14 ಮತ್ತು 8 ಮಂದಿ ಭಾಗವಹಿಸಿದ್ದರು. ಕೊಪ್ಪಳದಿಂದ ಶಂಕರ್ ಮತ್ತು ಮಲ್ಲಪ್ಪ, ಗವಿಸಿದ್ದಪ್ಪ, ಗದಗಿನಿಂದ ಶೀಲಾ ಮತ್ತು ಗಿರಿಜಾ ಪಾಟೀಲ್, ಮಂಡ್ಯದಿಂದ ಭಾಗ್ಯ, ದಕ್ಷಿಣ ಕನ್ನಡದಿಂದ ವತ್ಸಲಾ ನಾಯಕ್ ಮತ್ತು ಚಿತ್ರದುರ್ಗಾದಿಂದ ಸುಮಾ, ಅಂಬುಜಾ ಭಾಗವಹಿಸಿದರು. ರಾಜ್ಯ ಸಮುಚ್ಚಯದ ಸದಸ್ಯರು ನಿರ್ವಹಿಸಿದ ಪ್ರಕರಣಗಳ ಬಗ್ಗೆ ಮತ್ತು ಕಾನೂನು ಮಾಹಿತಿ ಕಾರ್ಯಕ್ರಮಗಳನ್ನು ನೀಡಿರುವ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಸುಗಮಕಾರರು ತಾವು ನಿರ್ವಹಿಸಿದ ಮಹಿಳಾ ಪ್ರಕರಣಗಳ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಪೂರಕ ಕಾನೂನು ಸುಗಮಕಾರರೊಂದಿಗೆ ನಡೆಸಿರುವ ಕಾನೂನು ಅರಿವು ಕಾರ್ಯಕ್ರಮಗಳ ಬಗ್ಗೆ ಅನಿಸಿಕೆಗಳನ್ನು ಬರೆದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಕಳುಹಿಸಿಕೊಡಲು ನಿರ್ಧರಿಸಲಾಯಿತು.

ಮುಂದಿನ ಸಭೆಯನ್ನು ನವೆಂಬರ್ ತಿಂಗಳಲ್ಲಿ ದೈಹಿಕವಾಗಿ ನಡೆಸುವ ಕುರಿತು ಚರ್ಚಿಸಲಾಯಿತು.

## ಪೂರಕ ಕಾನೂನು ಕಾರ್ಯಕ್ರಮಗಳು

### ಬಳ್ಳಾರಿ ಜಿಲ್ಲೆ

ಪೂರಕ ಕಾನೂನು ತರಬೇತಿ ಮತ್ತು ಯೋಜನೆಯ ಮಾಹಿತಿ ನೀಡುವ ಉದ್ದೇಶದೊಂದಿಗೆ ಪೂರಕ ಕಾನೂನು ಮಾಹಿತಿ ಕಾರ್ಯಕ್ರಮವನ್ನು 18–



8–2021 ಮತ್ತು 16–9–2021ರಂದು ವಿಮುಕ್ತಿ ಕಛೇರಿಯಲ್ಲಿ ನಡೆಸಲಾಯಿತು. 35 ಮಂದಿ ಅಭ್ಯರ್ಥಿಗಳು ಭಾಗವಹಿಸಿದ್ದರು. ಯೋಜನೆಯ ಉದ್ದೇಶ, 3 ಹಂತದ ತರಬೇತಿ–ವಿಷಯಗಳು, ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು, ತರಬೇತಿಯ ಲಾಭಗಳು, ಮೂಲಮಾಹಿತಿ ಸಂಗ್ರಹ ಬಗ್ಗೆ ಮಾಹಿತಿ ನೀಡಲಾಯಿತು. 2ನೇ ಸಭೆಯಲ್ಲಿ ಮೂಲಮಾಹಿತಿ ಸಂಗ್ರಹದಿಂದ ಆದ ಲಾಭಗಳನ್ನು ಶಿಬಿರಾರ್ಥಿಗಳು ಹಂಚಿಕೊಂಡರು. ಸುಗಮಕಾರರ ಅರ್ಜಿ ನಮೂನೆಯನ್ನು ಭರ್ತಿ ಮಾಡಿಸಲಾಯಿತು. ತುಕಾರಾಮ ಎಕ್ಕಾರು, ಖುಶಿ, ನೀಲಮ್ಮ, ಲಕ್ಷ್ಮಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

### ಬಾಗಲಕೋಟೆ ಜಿಲ್ಲೆ

ಪೂರಕ ಕಾನೂನು ತರಬೇತಿ ಮತ್ತು ಯೋಜನೆಯ ಮಾಹಿತಿ ನೀಡುವ ಉದ್ದೇಶದೊಂದಿಗೆ ಪೂರಕ ಕಾನೂನು ಮಾಹಿತಿ ಕಾರ್ಯಕ್ರಮವನ್ನು 20–9–2021ರಂದು ಕಾನೂನು ಸೇವಾ ಪ್ರಾಧಿಕಾರದ ಸಭಾಂಗಣದಲ್ಲಿ ನಡೆಸಲಾಯಿತು. ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸದಸ್ಯ ಕಾರ್ಯದರ್ಶಿಗಳು–ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಅಧ್ಯಕ್ಷರು–ವಕೀಲರ ಸಂಘ ಭಾಗವಹಿಸಿದ್ದರು. 31 ಮಂದಿ ಅಭ್ಯರ್ಥಿಗಳು ಭಾಗವಹಿಸಿದ್ದರು. ಯೋಜನೆಯ ಉದ್ದೇಶ, 3 ಹಂತದ ತರಬೇತಿ–



ವಿಷಯಗಳು, ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು, ತರಬೇತಿಯ ಲಾಭಗಳು, ಮೂಲಮಾಹಿತಿ ಸಂಗ್ರಹ ಬಗ್ಗೆ ಮಾಹಿತಿ ನೀಡಲಾಯಿತು. ತುಕಾರಾಮ ಎಕ್ಕಾರು, ಬೀಬಿಜಾನ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

## ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

### ದಕ್ಷಿಣ ಕನ್ನಡ

ಸಮುಚ್ಚಯದ ಸಭೆಯು 10–8–2021 ರಂದು ನಡೆಯಿತು. 16–8–2021ರಂದು ಅಸಕ್ತ ಸುಗಮಕಾರರಿಗೆ ಮಹಿಳಾ ಪ್ರಕರಣಗಳ ನಿರ್ವಹಣೆ



ಬಗ್ಗೆ ಮಾಹಿತಿ ಕಾರ್ಯಕ್ರಮ ನಡೆಯಿತು. ಮರ್ಲಿನ್ ಮಾರ್ಟಿಸ್ ಸಂಪನ್ಮೂಲ ವ್ಯಕ್ತಿಯಾಗಿದ್ದರು.

### ಗದಗ :

ಸಮುಚ್ಚಯದ ಸಭೆಯು 2021 ಜುಲೈ ತಿಂಗಳ 27ರಂದು ನಡೆದು ತಳಮಟ್ಟದ ಕಾನೂನು ಮಾಹಿತಿ ಕಾರ್ಯಕ್ರಮಗಳ ಕುರಿತು ಹಂಚಿಕೊಳ್ಳಲಾಯಿತು. ಆಗಸ್ಟ್ ತಿಂಗಳ 8ರಂದು ಮಹಿಳಾ ತರಬೇತುದಾರರ ರಾಜ್ಯ ಸಂಚಲನದ ವಾರ್ಷಿಕ ಸಭೆಯನ್ನು ಗದಗ ಜಿಲ್ಲೆಯ ಕಾನೂನು ಸುಗಮಕಾರರು ಸಂಘಟಿಸಿದ್ದರು.



### ಚಿತ್ರದುರ್ಗ

ಸಮುಚ್ಚಯದ ಸಭೆಯು 31–7–2021, 17–8–2021ರಂದು ಒಪ್ಪತ್ತಿನ ಮಠದಲ್ಲಿ ನಡೆಯಿತು. ತಳಮಟ್ಟದ ಮಾಹಿತಿ ಕಾರ್ಯಕ್ರಮ, ಪ್ರಕರಣಗಳ ನಿರ್ವಹಣೆಯ ಅನುಭವಗಳನ್ನು ಹಂಚಿಕೊಂಡರು. ಡೀಡ್ಸ್‌ನ ಖುಶಿ ದೇಸಾಯಿ



ಭಾಗವಹಿಸಿದ್ದರು. ಆಯ್ದ ಸದಸ್ಯರು ತಾಲೂಕು ಕಾನೂನು ಸೇವೆಗಳ ಸಮಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಖಿ ಕೇಂದ್ರಕ್ಕೆ ಭೇಟಿ ನೀಡಿದರು.

### ಕೊಪ್ಪಳ

ಸಮುಚ್ಚಯದ ಸಭೆಯು 2021 ಜುಲೈ ತಿಂಗಳ 24ರಂದು ನಡೆದು, KHPT ವತಿಯಿಂದ ಲಿಂಗ–ಲಿಂಗತ್ವ, ಮಹಿಳಾ ದೌರ್ಜನ್ಯ, ಬಾಲ್ಯವಿವಾಹ, ಪೋಕ್ಸೊ ವಿಷಯಗಳ ಕುರಿತು ಜಿಲ್ಲೆಯ ಹಳ್ಳಿಗಳಲ್ಲಿ ಹದಿಹರೆಯದವರಿಗೆ ಮತ್ತು ಅವರ ಪೋಷಕರಿಗೆ ಮಾಹಿತಿ ಕಾರ್ಯಕ್ರಮಗಳನ್ನು ನೀಡಲು ಸಮುಚ್ಚಯದ 11 ಜನ ಸುಗಮಕಾರರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲು ನಿರ್ಧರಿಸಿದರು. ಈ ಕುರಿತು ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ಆಗಸ್ಟ್ ತಿಂಗಳ 20ರಂದು KHPT ಸಂಘಟಿಸಿತು. ಹಳ್ಳಿಗಳ ಆಯ್ದೆಗಳಿಗೆ ಸಭೆ ನಡೆಸಲಾಯಿತು. ಸಪ್ಟೆಂಬರ್ ತಿಂಗಳ 12ರಂದು ಗೂಗಲ್ ಸಭೆ ನಡೆದು ಕಾನೂನು ಮಾಹಿತಿ ಕಾರ್ಯಕ್ರಮಗಳನ್ನು ನಡೆಸಲು ಚರ್ಚಿಸಲಾಯಿತು.

ಮುದ್ರಣ : ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್)
ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. - 575 002. ದೂರವಾಣಿ : 0824-2217022, 4281037
E-mail : deeds82@rediffmail.com Website : www.deedsmangaluru.com